

# ಬರಲಿದೆ ಶೇಖರ್ ಕಮ್ಮುಲ ಬಹುಭಾಷಾ ಸಿನಿಮಾ

ತೆಲುಗು ನಿರ್ದೇಶಕ ಶೇಖರ್ ಕಮ್ಮುಲ ಇದೇ ಮೊದಲ ಬಾರಿಗೆ ದೊಡ್ಡ ಬಜೆಟ್ ಚಿತ್ರವೊಂದನ್ನು ಕಟ್ಟಿಕೊಟ್ಟಿದ್ದಾರೆ. ಈ ತಿಂಗಳು ತೆರೆಕಾಣಲಿರುವ ಆ ಚಿತ್ರವೇ 'ಕುಬೇರ'. ತೆಲುಗು, ತಮಿಳು, ಹಿಂದಿ ಮೂರೂ ಭಾಷೆಗಳಲ್ಲಿ ಬರಲಿರುವ ಈ ಚಿತ್ರದ ಬಜೆಟ್ ನೂರು ಕೋಟಿ ದಾಟಿದೆ.

ಧನುಷ್, ನಾಗಾರ್ಜುನ, ರಶ್ಮಿಕಾ ಮಂದಣ್ಣ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿರುವ ಈ ಸಿನಿಮಾದಲ್ಲಿ ಸಾಮಾಜಿಕ ಆಯಾಮದ ಪ್ರಮುಖ ಕತೆಯೊಂದು ಇದೆ ಎಂದು ನಿರ್ದೇಶಕರು ಹೇಳಿದ್ದಾರೆ.

'ಹ್ಯಾಪಿ ಡೇಸ್' ಚಿತ್ರದಲ್ಲಿ ಕಾಲೇಜು ಹುಡುಗ – ಹುಡುಗಿಯರ ಭಾವುಕ ಬದುಕಿಗೆ ಕನ್ನಡಿ ಹಿಡಿದವರು ಕಮ್ಮುಲ. 'ಟೈಟಾನಿಕ್' ಸಿನಿಮಾ ನೋಡಿದ ಮೇಲೆ, ಭಾರತದ ಜಾಯಮಾನಕ್ಕೆ ಹೊಂದುವ 'ಗೋದಾವರಿ' ಚಿತ್ರವನ್ನು ಅವರು ನಿರ್ದೇಶಿಸಿ, ನವಿರಾದ ಪ್ರೇಮ ಕಥನವನ್ನು ಕೊಟ್ಟಿದ್ದರು. 'ಫಿದಾ', 'ಲವ್ ಸ್ಟೋರಿ' ತೆಲುಗು ಸಿನಿಮಾಗಳು ಸಾಯಿ ಪಲ್ಲವಿ ಅವರಿಗೆ ಎಂತಹ ಜಿಗಿತ ಎನ್ನುವುದೂ ತಿಳಿದಿದೆ. ಇದೀಗ ರಶ್ಮಿಕಾ ಈ ನಿರ್ದೇಶಕರ ನಿಕಷಕ್ಕೆ ಒಡ್ಡಿಕೊಂಡಿದ್ದಾರೆ. ಜಿಮ್ ಸರಭ್ ಹಾಗೂ ದಿಲೀಪ್ ತಾಹೀಲ್ ಅವರಂತಹ ಹಿಂದಿ ಭಾಷೆಯ ನುರಿತ ನಟರೂ ಸಿನಿಮಾದಲ್ಲಿ ಇದ್ದಾರೆ.

ಚಿತ್ರದ ಟ್ರೈಲರ್ ನೋಡಿದರೆ ಇದು ಪ್ರೇಮ ಕಥೆ ಅಲ್ಲ ಎನ್ನುವುದು ಗೊತ್ತಾಗುತ್ತದೆ. ಒಂದು ಕಡೆ, ಹಿಂದಿ ಸಿನಿಮಾದವರು ಯಾವ ಸಿನಿಮಾ ಮಾಡಬೇಕು ಎಂಬ ಜಿಜ್ಞಾಸೆಯಲ್ಲಿ ಮುಳುಗಿದ್ದಾರೆ. ಇನ್ನೊಂದೆಡೆ, ಶೇಖರ್ ಕಮ್ಮುಲ ತರಹದ ನಿರ್ದೇಶಕರು ಕನಸುಗಳನ್ನು ವಿಸ್ತರಿಸುತ್ತಾ ಬಹುಭಾಷಾ ಸಿನಿಮಾ ಮಾಡತೊಡಗಿದ್ದಾರೆ. ■

ಬಾಲಿವುಡ್

■ ವಿಶಾಖ ಎನ್.

# ಕುರಿಗಳು ಸಾರ್ ಕುರಿಗಳು ಕರಣ್ ವಿಶ್ಲೇಷಣೆ

ಹಿಂದಿ ಚಿತ್ರರಂಗವು ಏದುಸಿರು ಬಿಡುತ್ತಿದೆ. ಘಟಾನುಘಟಿಗಳು ಕೂಡ ಅಲ್ಲಿ ಯಾವ ಸಿನಿಮಾ ಮಾಡಿದರೆ ದಮ್ಮಡಿ ಕಾಸು ಹೆಚ್ಚು ಹುಟ್ಟುತ್ತದೆ ಎಂದು ಸ್ಪಷ್ಟವಾಗಿ ಹೇಳಲು ಆಗದ ಸ್ಥಿತಿಯಲ್ಲಿ ಇದ್ದಾರೆ. 'ಸ್ತ್ರೀ' ಸರಣಿ ಚಿತ್ರಗಳು ಗೆದ್ದಾಗ ಹಾರರ್ – ಕಾಮಿಡಿ ಹಿಟ್ ಆದೀತು ಎಂದು ಅನೇಕರು ಅಂಥವೇ ಸ್ಕ್ರಿಪ್ಟ್ ಮಾಡತೊಡಗಿದರು. 'ಛಾವಾ' ಗೆದ್ದಾಗ ಐತಿಹಾಸಿಕ ಸಿನಿಮಾಗೆ ಇದು ಒಳ್ಳೆಯ ಕಾಲ ಎಂದು ಮಾತಾಡಿಕೊಂಡರು. ಇವೆಲ್ಲವನ್ನೂ ನಿರ್ದೇಶಕ, ನಿರ್ಮಾಪಕ ಕರಣ್ ಜೋಹರ್ ಅಲ್ಲಗಳೆಯುತ್ತಾರೆ. ಅವರು ಇತ್ತೀಚೆಗೆ ಸಂದರ್ಶನವೊಂದರಲ್ಲಿ ಮುಕ್ತವಾಗಿ ಮಾತಾಡುತ್ತಾ ಹೋದರು. ಒಮ್ಮೆ ಅವರನ್ನು ಒಬ್ಬರು ಕೇಳಿದರಂತೆ – 'ನಿಮ್ಮ ಚಿತ್ರಗಳು ಯಾವ ಯೂನಿವರ್ಸ್‌ಗೆ ಸೇರಿವೆ?' ಆ ಪ್ರಶ್ನೆಯೇ ಮೊದಲಿಗೆ ಕರಣ್ ಅವರಿಗೆ ಅರ್ಥ ಆಗಲಿಲ್ಲ. ಆಗ ಪ್ರಶ್ನೆ ಕೇಳಿದವರು ಇನ್ನೂ ಸ್ಪಷ್ಟವಾಗಿ ತಾವು ಕೇಳಿದ್ದು ಏನು ಎಂದು ಬಿಡಿಸಿ ಹೇಳಿದ್ದು ಹೀಗೆ: 'ಪೊಲೀಸ್ ಯೂನಿವರ್ಸ್, ಹಾರರ್ ಯೂನಿವರ್ಸ್ ಅಂತಾರಲ್ಲ... ನಿಮ್ಮದು ಯಾವ ಯೂನಿವರ್ಸ್?' ಈ ಪ್ರಶ್ನೆ ಕೇಳಿ ಮೊದಲು ಕರಣ್ ನಕ್ಕಿದ್ದಾರೆ. ಆಮೇಲೆ ಸಾವರಿಸಿಕೊಂಡು, 'ನನ್ನದು ಸಿನಿಮಾ ಯೂನಿವರ್ಸ್' ಎಂದು ಹೇಳಿದ್ದಾರೆ.

ಸಿನಿಮಾ ತಯಾರಕರೆಲ್ಲ ಕುರಿಗಳ ತರಹ ವರ್ತಿಸುತ್ತಿದ್ದಾರೆ ಎನ್ನುವುದು ಕರಣ್ ತಕರಾರು. ಮಂದೆಯಲಿ ಒಂದಾಗಿ ಸಾಗುತ್ತಾ, ಅದರ ಬಾಲ ಇದು ಮೂಸುವ ಪರಿಯಲ್ಲಿ ಪಯಣ ಸಾಗುತ್ತಿದೆ. 'ಪುಷ್ಪ 2' ತೆಲುಗು ಸಿನಿಮಾ ಎರಡನೇ ಹಾಗೂ ಮೂರನೇ ಹಂತದ ನಗರ– ಪಟ್ಟಣಗಳ ಪ್ರೇಕ್ಷಕರನ್ನು ಸೆಳೆಯಿತು. ಅದನ್ನು ನೋಡಿ, ಅಂತಹ ನಾಯಕ ಚಿತ್ರಗಳಲ್ಲಿ ಇದ್ದರೆ ಓಡಬಹುದು ಎಂದು ಭಾವಿಸಿ ಅದೇ ರೀತಿಯ ಕತೆ ಮಾಡಲು ಮುಂದಾಗುವ ವರ್ಗ ಇದೆ. 'ಛಾವಾ' ಬಂದಾಗಲೂ ಅದೇ ಧೋರಣೆಯಿಂದ ಯೋಚಿಸಿ, ಸಿನಿಮಾ ಸ್ಕ್ರಿಪ್ಟ್ ಬಗ್ಗೆ ಚರ್ಚೆ ನಡೆಸಿದ ವರ್ಗವೊಂದು ಇದೆ. ಸಿನಿಮಾ ಚೆನ್ನಾಗಿದ್ದರೆ ಗೆಲ್ಲುತ್ತದೆ ಎನ್ನುವುದಷ್ಟೆ ಸತ್ಯ. ಅದು ಯಾವ ಪ್ರಭೇದದ್ದು ಎನ್ನುವುದು ಪ್ರೇಕ್ಷಕರ ಪ್ರತಿಕ್ರಿಯೆಗೆ ತಕ್ಕಂತೆ ಬದಲಾಗಬೇಕು ಅಷ್ಟೇ ಎನ್ನುವುದು ಕರಣ್ ಪ್ರತಿಪಾದನೆ.

ನೀರಜ್ ಘಾಯ್ವಾನ್ ನಿರ್ದೇಶನದ 'ಹೋಮ್ ಬೌಂಡ್' ಸಿನಿಮಾ ಪ್ರೀಮಿಯರ್ ಪ್ರದರ್ಶನಕ್ಕೆ ಕಾನ್‌ಗೆ ಕರಣ್ ಹೋಗಿದ್ದರು. ಆ ಚಿತ್ರಕ್ಕೆ ತಮ್ಮ ಧರ್ಮ ಪ್ರೊಡಕ್ಷನ್ಸ್ ಸಂಸ್ಥೆಯ ಮೂಲಕ ಕರಣ್ ಬೆಂಬಲ ನೀಡಿದ್ದಾರೆ.

ಅದೇನೋ ಸರಿ, ಈಗ ಯಾವ ಕತೆ ಓಡುತ್ತದೆ ಎಂಬ ಪ್ರಶ್ನೆ ಹಾಕಿದರೆ ಅದಕ್ಕೂ ಕರಣ್ ನಗುವಷ್ಟೇ ಉತ್ತರವಾಗಿ ಸಿಗುತ್ತದೆ. ಒಂದೇ ಭಿತ್ತಿ ಸಿದ್ಧಪಡಿಸಿಕೊಂಡು, ಅದರಲ್ಲೇ ಸರಣಿ ಚಿತ್ರಗಳನ್ನು ಮಾಡುವುದು ತಮ್ಮ ಜಾಯಮಾನಕ್ಕೆ ಒಗ್ಗುವುದಿಲ್ಲ ಎನ್ನುವುದನ್ನು ಅವರು ಸ್ಪಷ್ಟವಾಗಿ ಹೇಳುತ್ತಾರೆ. ■

